

**ಕಿವಿಮಾತು**

**ತಾಯತ ಕಟ್ಟಿಸುವಂತಹವುಗಳಲ್ಲಿ ನಿಮಗೆ ನಂಬಿಕೆಯಿದ್ದರೆ ಪಾಲಿಸಿ. ಆದರೆ ವೈದ್ಯರಲ್ಲಿ ತೋರಿಸುವುದನ್ನು ಮರೆಯಬೇಡಿ.**

ಹೆಣ್ಣುಮಕ್ಕಳಲ್ಲಿ ಮೂತ್ರದ ಸೋಂಕಿನ ಸಾಧ್ಯತೆ ಹೆಚ್ಚು. ಸರಿಯಾಗಿ ಗುರುತಿಸಿ ಚಿಕಿತ್ಸೆ ನೀಡದಿದ್ದಲ್ಲಿ ಮೂತ್ರಪಿಂಡಗಳು ಹಾನಿಗೊಳಗಾಗಿ ರಕ್ತದೊತ್ತಡದಂಥ ಸಮಸ್ಯೆಗಳುಂಟಾಗುವ ಸಾಧ್ಯತೆಯಿರುತ್ತದೆ. ಸೂಕ್ಷ್ಮದರ್ಶಕದಡಿಯಲ್ಲಿ ಮೂತ್ರ ಪರೀಕ್ಷೆ, ಮೂತ್ರದ ಕಲ್ಚರ್, ಅಲ್ಟ್ರಾಸೌಂಡ್ ಮುಂತಾದ ಕೆಲವು ಪರೀಕ್ಷೆಗಳಿಂದ ಈ ಸಮಸ್ಯೆಯನ್ನು ದೃಢೀಕರಿಸಿದ ನಂತರ ಸೂಕ್ತ ಆ್ಯಂಟಿಬಯೊಟಿಕ್‌ಗಳನ್ನು ಬಳಸಿ ಚಿಕಿತ್ಸೆ ನೀಡಲಾಗುತ್ತದೆ.

## ಮೆದುಳುಪೊರೆಯ ಉರಿಯೂತ

ಹಿಮೋಫಿಲಸ್ ಇನ್ ಫ್ಲುಯೆಂಜಾ ಬಿ, ನ್ಯುಮೋಕಾಕ್ಕೈ, ಮೆನಿಂಗೋಕಾಕ್ಕೈ ಮುಂತಾದ ಬ್ಯಾಕ್ಟೀರಿಯಾಗಳ ಸೋಂಕಿನಿಂದುಂಟಾಗುವ ಮೆದುಳುಪೊರೆಯ ಉರಿಯೂತದ ಸಂಭವನೀಯತೆ ಐದು ವರ್ಷಗಳೊಳಗಿನ ಮಕ್ಕಳಲ್ಲಿ ಹೆಚ್ಚು. ಜ್ವರ, ಫಿಟ್ಸ್ , ಪ್ರಜ್ಞಾಹೀನತೆ, ಇತ್ಯಾದಿ ಈ ರೋಗದ ಲಕ್ಷಣಗಳು.

ಮೆದುಳು ದ್ರವದ ಪರೀಕ್ಷೆ, ಸಿ ಟಿ ಸ್ಕ್ಯಾನ್ ಮುಂತಾದ ಪರೀಕ್ಷೆಗಳಿಂದ ದೃಢೀಕರಿಸಿದ ನಂತರ ಸೂಕ್ತ ಆ್ಯಂಟಿಬಯೊಟಿಕ್‌ಗಳನ್ನು ಬಳಸಿ ಚಿಕಿತ್ಸೆ ನೀಡಲಾಗುತ್ತದೆ. ಸೂಕ್ತ ಸಮಯದಲ್ಲಿ ಗುರುತಿಸಿ ಚಿಕಿತ್ಸೆ ನೀಡದಿದ್ದಲ್ಲಿ ಬುದ್ಧಿಮಾಂದ್ಯತೆ, ಅಂಗವೈಕಲ್ಯ, ಎಪಿಲೆಪ್ಸಿ, ಅಂಧತ್ವ, ಕಿವುಡುತನ ಮುಂತಾದ ದುಷ್ಪರಿಣಾಮಗಳುಂಟಾಗುವ ಸಾಧ್ಯತೆಗಳಿವೆ.

ಪೆಂಟಾವಲೆಂಟ್, ನ್ಯುಮೋಕಾಕಲ್ ಮತ್ತು ಮೆನಿಂಗೋಕಾಕಲ್ ಲಸಿಕೆಗಳು ಆಯಾ ಬ್ಯಾಕ್ಟೀರಿಯಾದಿಂದುಂಟಾಗುವ ವಿದುಳುಪೊರೆಯ ಉರಿಯೂತವನ್ನು ತಡೆಗಟ್ಟಬಲ್ಲವು. ಮೊದಲೆರಡು ಲಸಿಕೆಗಳನ್ನು ಸರ್ಕಾರವೇ ಉಚಿತವಾಗಿ ನೀಡುತ್ತದೆ. ಮೆನಿಂಗೋಕಾಕಲ್ ಲಸಿಕೆಯನ್ನು ವೈದ್ಯರ ಸಲಹೆಯ ಮೇರೆಗೆ ಪಡೆಯಬಹುದು.

## ಕವಾಸಾಕಿ ಕಾಯಿಲೆ

ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಈ ಕಾಯಿಲೆಯಲ್ಲಿ ಜ್ವರವೇ ಪ್ರಮುಖ ರೋಗಲಕ್ಷಣವಾಗಿರುತ್ತದೆ. ಐದು ವರ್ಷಗಳೊಳಗಿನ ಮಕ್ಕಳಲ್ಲಿ ಐದು ದಿನಗಳಿಗೂ ಮೇಲ್ಪಟ್ಟು ನಿರಂತರವಾಗಿ ಬರುವ ಜ್ವರ, ಕಣ್ಣುಗಳು ಕೀವುರಹಿತವಾಗಿ ಕೆಂಪಾಗುವುದು, ಸ್ಟ್ರಾಬೆರಿ ಹಣ್ಣಿನಂಥ ನಾಲಗೆ, ದುಗ್ಧಗ್ರಂಥಿಗಳು ಊದಿಕೊಳ್ಳುವುದು, ಚರ್ಮದ ಮೇಲೆ ಗುಲಾಬಿ ವರ್ಣದ ದದ್ದುಗಳು, ಕೀಲುಗಳ ಉರಿಯೂತ ಮುಂತಾದವು ಈ ಕಾಯಿಲೆಯ ಪ್ರಮುಖ ರೋಗಲಕ್ಷಣಗಳು. ಇದೇ ರೋಗಲಕ್ಷಣಗಳು 'ಕೊರೊನೋತ್ತರ ಬಹು ಅಂಗಗಳ ಉರಿಯೂತದ ಸಿಂಡ್ರೋಮ್ (MISC)'ನಲ್ಲೂ ಕಂಡುಬರುತ್ತವೆ.

ಸರಿಯಾಗಿ ಗುರುತಿಸಿ ಚಿಕಿತ್ಸೆ ನೀಡದಿದ್ದಲ್ಲಿ ಹೃದಯಾಘಾತ, ಕಿರೀಟ ಧಮನಿಯು ಹಿಗ್ಗುವುದು ಇಲ್ಲವೇ ಒಡೆದುಹೋಗುವುದು ಮುಂತಾದ ಸಮಸ್ಯೆಗಳುಂಟಾಗಬಹುದು.

## ನಿರ್ಜಲತೆಯ ಜ್ವರ

ಸಾಮಾನ್ಯವಾಗಿ ವಾತಾವರಣದ ಉಷ್ಣತೆಯಲ್ಲಿ ವಿಪರೀತ ಏರಿಕೆಯಾದಾಗ ಕೆಲವು ನವಜಾತ ಶಿಶುಗಳಲ್ಲಿ ನಿರ್ಜಲೀಕರಣ ಉಂಟಾಗಿ ಜ್ವರ ಬರುತ್ತದೆ. ಅಪರೂಪಕ್ಕೊಮ್ಮೆ ಫಿಟ್ಸ್ ಸಹ ಬರಬಹುದು. ಫ್ಯಾನ್, ಕೂಲರ್‌ಗಳನ್ನು ಬಳಸಿ ವಾತಾವರಣದ ಉಷ್ಣತೆಯನ್ನು ತಗ್ಗಿಸುವುದು ಮತ್ತು ಹೆಚ್ಚು ಬಾರಿ ಸ್ತನ್ಯಪಾನ ಮಾಡಿಸುವಂಥ ಸುಲಭೋಪಾಯಗಳಿಂದ ಈ ಸಮಸ್ಯೆಯನ್ನು ಪರಿಹರಿಸಬಹುದು.

## ಔಷಧಗಳಿಂದುಂಟಾಗುವ ಜ್ವರ

ಕೆಲವೊಮ್ಮೆ ಸೇವಿಸುವ ಔಷಧಗಳಿಂದಲೇ ಜ್ವರ ಬರುವ ಸಾಧ್ಯತೆಯಿರುತ್ತದೆ. ಔಷಧಗಳ ಸೇವನೆಯನ್ನು ನಿಲ್ಲಿಸಿದ ಕೂಡಲೇ ಅಂಥ ಜ್ವರ ತಹಬದಿಗೆ ಬರುತ್ತದೆ.

## ಲಸಿಕೆಗಳಿಂದುಂಟಾಗುವ ಜ್ವರ

ಪೆಂಟಾವಲೆಂಟ್, ಡಿಪಿಟಿ, ಟೈಫಾಯಿಡ್

**ಕಿವಿಮಾತು**

**ಪ್ಯಾರಸಿಟಮಾಲ್ ಮತ್ತು ಐಬುಪ್ರೊಫೆನ್ - ಹೀಗೆ ಎರಡೆರಡು ಔಷಧಗಳಿರುವ ಸಂಯುಕ್ತ ಬ್ರ್ಯಾಂಡ್‌ಗಳ ಬದಲು ಸಾಧ್ಯವಾದಷ್ಟೂ ಒಂದೇ ಔಷಧದ ಮೊರೆ ಹೋಗಿ. ಸಂಯುಕ್ತ ಬ್ರ್ಯಾಂಡ್‌ಗಳ ಬಳಕೆಯಿಂದ ಪಾರ್ಶ್ವ ಪರಿಣಾಮಗಳ ಸಾಧ್ಯತೆ ಹೆಚ್ಚು.**

**ಕಿವಿಮಾತು**

**ಹಲ್ಲು ಮೂಡುವಾಗ ಜ್ವರ ಬರುತ್ತದೆಂದು ಕೆಲವರು ನಂಬುತ್ತಾರೆ. ವಾಸ್ತವವಾಗಿ ಹಲ್ಲು ಮೂಡುವುದಕ್ಕೂ ಜ್ವರ ಬರುವುದಕ್ಕೂ ಯಾವುದೇ ಸಂಬಂಧವಿಲ್ಲ. ಹಾಗೆ ಬಂದಿರುವ ಜ್ವರ ಬೇರೆ ಕಾರಣದಿಂದ ಇರಬಹುದು. ಉದಾಸೀನ ತೋರದೆ ವೈದ್ಯರಲ್ಲಿ ತೋರಿಸಿ ಚಿಕಿತ್ಸೆ ಕೊಡಿಸಿ.**

